International Journal of Kannada Research
www.kannadajournal.com

ISSN: 2454–5813
IJKR 2020; 6(4): 107-109
© 2020 IJKR
www.kannadajournal.com
Received: 21-08-2020
Accepted: 23-09-2020

**ವಿನಯ್.ಎಂ**
ಸಹಾಯಕ ಪ್ರಾಧ್ಯಾಪಕರು,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ದಾವನಾಗರೆ ವಿಶ್ವವಿದ್ಯಾಲಯ, ದಾವನಾಗರೆ, ಕರ್ನಾಟಕ, ಭಾರತ

**Corresponding Author:**
**ವಿನಯ್.ಎಂ**
ಸಹಾಯಕ ಪ್ರಾಧ್ಯಾಪಕರು,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ದಾವನಾಗರೆ ವಿಶ್ವವಿದ್ಯಾಲಯ, ದಾವನಾಗರೆ, ಕರ್ನಾಟಕ, ಭಾರತ

# ಸಾಮಾಜಿಕ ಜಾಲತಾಣಗಳ ಪ್ರಭಾವ ಮತ್ತು ಅಗತ್ಯತೆಯ ಕುರಿತು ಸಂಕ್ಷಿಪ್ತ ಅಧ್ಯಯನ

**ವಿನಯ್.ಎಂ**

**ಪೀಠಿಕೆ:**

ನೆಲೆ ನಿಂತು ಭೂಮಿ ಹದಮಾಡಿ ರೈತನಾದ ತಾನು ಬೆಳೆದ ಪದಾರ್ಥಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಮುಂದಾದ ಕುಟುಂಬಗಳನ್ನು ರಚಿಸಿಕೊಂಡು ಹಳ್ಳಿ, ಗ್ರಾಮ, ತಾಲ್ಲೂಕು, ನಗರ ದೇಶಗಳನ್ನಾಗಿ ರೂಪಿಸಿದ ಗಣಿತ, ವಿಜ್ಞಾನ, ವೈದ್ಯ, ಖಗೋಳಶಾಸ್ತ್ರ ರಚಿಸಿಕೊಂಡು ಜೀವನ ಶೈಲಿ ಹಾಗೂ ಅವಶ್ಯಕತೆಗೆ ತಕ್ಕಂತೆ ಅನೇಕ ಆವಿಷ್ಕಾರಗಳನ್ನು ಅದರಲ್ಲೂ ತಾಂತ್ರಿಕವಾದ ಆವಿಷ್ಕಾರಗಳನ್ನು ಮಾಡಲು ಮುಂದಾದ, ಇದರ ಫಲವಾಗಿ ರಾಕೆಟ್ ಮೂಲಕ ಚಂದ್ರನ ಮೇಲೆ ಪಾದ ಸ್ಪರ್ಶಮಾಡಿ ಬಂದ, ನಂತರದಲ್ಲಿ ಉಪಗ್ರಹಗಳನ್ನು ಉಡಾಯಿಸಿ ರೇಡಿಯೋ ಟೆಲಿಫೋನ್, ಟೆಲಿಗ್ರಾಫ್, ದೂರದರ್ಶನ ಕಂಡು ಹಿಡಿದನು.ಇಷ್ಟಾದರೂ ಈತನ ದಾಹ ಇನ್ನೂ ತೀರಲಿಲ್ಲಾ ಇದಕ್ಕಾಗಿ ಮಾನವ ಇತಿಹಾಸದಲ್ಲಿ ಅಚ್ಚರಿಯಾದ ಕಂಪ್ಯೂಟರ್ ಎಂಬ ಉಪಕರಣವನ್ನು ಕಂಡು ಹಿಡಿದು ತನ್ನ ಜೀವನವನ್ನು ಮತ್ತಷ್ಟು ಸುಗಮಗೊಳಿಸಿಕೊಂಡನು. ಹೀಗೆ ಹಂತ–ಹಂತವಾಗಿ ಬೆಳೆಯುತ್ತಾ ಬಂದ ಈ ವಿಶ್ವವು ಇಂದು ತಂತ್ರಜ್ಞಾನ ಯುಗವಾಗಿ ನಿಂತಿದೆ. ಬೆರಳ ತುದಿಯಲ್ಲಿ ಬೆರಳ ಚಲನವಲನಗಳ ಮೂಲಕ ಎಲ್ಲಾ ಮಾಹಿತಿಯನ್ನು ಈ ಸಾಮಾಜಿಕ ಜಾಲ ತಾಣಗಳ ಮೂಲಕ ಪಡೆಯಬಹುದಾಗಿದೆ. ಈ ಜಾಲತಾಣಗಳಿಗೆ ಇಂಟರ್‌ನೆಟ್ ಆಮ್ಲಜನಕವಿದ್ದಂತೆ, ಇಂಟರ್‌ನೆಟ್ ಇಲ್ಲಾ ಎಂದರೆ ಜಾಲತಾಣಗಳು ತನ್ನ ಕಾರ್ಯವನ್ನು ಸ್ಥಗಿತಗೊಳಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಅತ್ಯಂತ ಜನಪ್ರಿಯಗೊಳ್ಳುತ್ತಾ ಹೋಗುತ್ತಿವೆ. ಪ್ರತಿಯೊಬ್ಬರು ಸಾಮಾಜಿಕ ಜಾಲತಾಣಗಳ ಬಗೆಗೆ ಜ್ಞಾನ ಹೊಂದಿರುತ್ತಾರೆ. ಇವು ಕೂಡ ಸಮೂಹ ಮಾಧ್ಯಮವಾಗಿ ಪರಿವರ್ತನೆಯಾಗಿ ಬಿಟ್ಟಿವೆ. ಈಗಾಗಿ ಈಗಿನ ಯುವಜನರ ನೆಚ್ಚಿನ ಆಯ್ಕೆ ಜಾಲತಾಣಗಳು, ಅದರಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳು ತಮ್ಮ ಜೀವನದ ಒಂದು ಅವಿಭಾಜ್ಯ ಅಂಗವೆಂಬಂತೆ ಇದನ್ನು ಅಳವಡಿಸಿಕೊಂಡಿದ್ದಾರೆ.ತಮ್ಮ ಪ್ರತಿಯೊಂದು ಚಟುವಟಿಕೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಜಾಲತಾಣಗಳನ್ನು ಅವಲಂಬಿಸಿದ್ದಾರೆ. ಎಲ್ಲರೂ ಜಾಲ ತಾಣಗಳ ಪ್ರೊಫೈಲ್ ಹೊಂದಿದ್ದಾರೆ. ಇವನ್ನು ಪ್ರಮುಖವಾಗಿ ಜನರು ಸ್ನೇಹಿತರು ಸಂಬಂಧಿಕರ ಜೊತೆಗೆ ಸಂಪರ್ಕ ಸಾಧಿಸಲು, ಪರಸ್ಪರ ವೈಯಕ್ತಿಕ ಸಂವಹನಕ್ಕಾಗಿ ಇತರರೊಡನೆ ಬೆರೆತು ಅನಿಸಿಕೆ ಅಭಿಪ್ರಾಯ ಹಂಚಿಕೊಳ್ಳಲು, ಪ್ರಮುಖವಾಗಿ ಮಾಹಿತಿಯನ್ನು ಪಡೆಯಲು ಹೊಸ ಹೊಸ ವಿಷಯಗಳನ್ನು ಅರಿಯಲು ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ವಿಷಯಾವಾರು ಮಾಹಿತಿ ಪಡೆಯಲು ಜ್ಞಾನಾರ್ಜನೆಗಾಗಿ ಪ್ರಸ್ತುತ ದಿನಮಾನಗಳ ವಿದ್ಯಮಾನಗಳನ್ನು ಅರಿಯಲು ಜಾಲತಾಣಗಳನ್ನು ಬಳಸುತ್ತಿದ್ದಾರೆ.

ಮೊದ ಮೊದಲು ಮೋಜಿಗಾಗಿ ಇವನ್ನು ಬಳಸುತ್ತಾ ಬಳಸುತ್ತಾ ನಂತರ ವ್ಯಸನಿಗಳಾಗುತ್ತಿದ್ದಾರೆ. ತಮ್ಮ ಜೀವನದ ಬಹು ಪಾಲು ಸಮಯವನ್ನು ಜಾಲ ತಾಣಗಳಲ್ಲಿಯೇ ಕಳೆಯುತ್ತಿದ್ದಾರೆ. ಶೈಕ್ಷಣಿಕ ಗುಣ ಮಟ್ಟವು ಕಡಿಮೆಯಾಗುತ್ತಿದೆ, ಮಧ್ಯರಾತ್ರಿಯವರೆಗೂ ಇವನ್ನು ಬಳಸುತ್ತಿರುವುದರಿಂದ ಆರೋಗ್ಯದ ಮೇಲು ವ್ಯತಿರಿಕ್ತ ಪರಿಣಾಮ ಬೀರುತ್ತಿದೆ, ಕುಟುಂಬದೊಂದಿಗೆ ಸಮಯವನ್ನು ಕಳೆಯುತ್ತಿಲ್ಲಾ, ತಮ್ಮ ಸ್ವ ವಿವರವನ್ನು ವೈಯಕ್ತಿಕ ಮಾಹಿತಿಯನ್ನು ಅಪರಿಚಿತರಿಗೆ ನೀಡುತ್ತಾರೆ. ಇದರಿಂದ ಸುಲಭವಾಗಿ ಅಪರಿಚಿತರು ಮೋಸ ಮಾಡಬಹುದಾಗಿದೆ.

ಜಾಲತಾಣಗಳು ಎಷ್ಟು ಉಪಯೋಗಕರವೋ ಅಷ್ಟೇ ಹಾನಿಕಾರಕವೂ ಕೂಡ ಆಗಿ ಹೋಗಿದೆ. ಇಂತಹ ಸಂದರ್ಭದಲ್ಲಿ ಈ ಸಾಮಾಜಿಕ ಜಾಲತಾಣಗಳು ಎಷ್ಟರ ಮಟ್ಟಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳ ಮೇಲೆ

ಸಕಾರಾತ್ಮಕ ಹಾಗೂ ನಕಾರಾತ್ಮಕವಾಗಿ ಪ್ರಭಾವವನ್ನು ಬೀರಿವೆ ಎಂಬುದನ್ನು ತಿಳಿಯವುದು ಈ ಕಿರು ಪ್ರಬಂಧದ ಉದ್ದೇಶವಾಗಿದೆ.

**ಪ್ರಾಕಲ್ಪನೆಗಳು**

1) ಸಾಮಾಜಿಕ ಜಾಲತಾಣಗಳನ್ನು ಮಾಹಿತಿ ಪಡೆಯಲು ಬಳಸುತ್ತಾರೆಯೇ?
2) ಸಾಮಾಜಿಕ ಜಾಲತಾಣಗಳಿಂದ ಜ್ಞಾನ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದೇ?
3) ಮನೋರಂಜನೆ ಉದ್ದೇಶದಿಂದ ಬಳಸುತ್ತಾರೆಯೇ?
4) ಸಾಮಾಜಿಕ ಜಾಲತಾಣಗಳಿಂದ ಪಡೆಯುವ ಮಾಹಿತಿ ಸತ್ಯದಿಂದ ದೂರವಿರುವ ಸಾಧ್ಯತೆ ಇರುತ್ತದೆಯೇ?

**ಅಧ್ಯಯನ ಕ್ಷೇತ್ರ :**

ಸಂಶೋಧನೆ ನಡೆಸುವವರ ಮೂಲ ಮಾಹಿತಿಗಳ ಆಧಾರದಲ್ಲಿ ವಿಶ್ಲೇಷಣೆ ನಡೆಸಿ ಪೂರ್ವ ಕಲ್ಪನೆಗಳಿಗೆ ಸಮರ್ಥನೆ ಕಂಡುಕೊಳ್ಳ ಬೇಕಾಗುತ್ತದೆ.ಮೂಲ ಮಾಹಿತಿಯನ್ನು ಪಡೆಯಲು ಕ್ಷೇತ್ರ ಅಧ್ಯಾಯನವನ್ನು ನಡೆಸಬೇಕಾಗುತ್ತದೆ.ಚರ ಪರಿಮಾಣಗಳ ನಡುವಣ ಸಂಬಂಧ ಕಂಡುಕೊಳ್ಳಲು ನಡೆಸುವ ವೈಜ್ಞಾನಿಕ ವಿಚಾರಣೆಗಳಿಗೆ ಕ್ಷೇತ್ರ ಅಧ್ಯಯನ ಎಂದು ಕರೆಯುತ್ತಾರೆ.

ಈ ಕ್ಷೇತ್ರ ಅಧ್ಯಯನವು ಸೀಮಿತವಾಗಿರುತ್ತದೆ. ಇದರಿಂದ ಆ ಪ್ರದೇಶದ ಬಗೆಗೆ ನನ್ನ ಈ ಸಂಶೋಧನಾ ಕಿರು ಪ್ರಬಂಧಕ್ಕೆ ಸಂಬಂಧಿಸಿದಂತೆ ಅಧ್ಯಯನ ಕ್ಷೇತ್ರವಾಗಿ ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

**ನಮೂನೆ:**

ಈ ಅಧ್ಯಯನಕ್ಕೆ ಸಂಬಂದಪಟ್ಟಂತೆ ಮಾಹಿತಿ ಪಡೆಯಲು ಪ್ರಶ್ನಾವಳಿ ಹಾಗೂ ಸಮೀಕ್ಷಾ ವಿಧಾನವನ್ನು ಅನುಸರಿಸುತ್ತೇನೆ. ಹಾಗೂ ಈ ಸಂಶೋಧನೆಗೆ ವಿಶ್ವ ವಿದ್ಯಾನಿಲಯದ ವಿವಿಧ ವಿಭಾಗದ ವಿದ್ಯಾರ್ಥಿಗಳಲ್ಲಿ 100 ಜನರನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ 50 ವಿದ್ಯಾರ್ಥಿ ಹಾಗೂ 50 ವಿದ್ಯಾರ್ಥಿನಿಯರನ್ನು 18 ರಿಂದ 30 ವರ್ಷ ವಯೋಮಿತಿಯ ಮೇಲೆ ಆಯ್ಕೆ ಮಾಡಿಕೊಂಡು ಮಾಹಿತಿ ಪಡೆದಿರುತ್ತೇನೆ.

**ದತ್ತಾಂಶ ವಿಶ್ಲೇಷಣೆ:**

ಸಾಮಾಜಿಕ ಜಾಲತಾಣಗಳು ಆಧುನಿಕ ಯುಗದಲ್ಲಿ ತನ್ನದೇ ಆದ ವಿಭಿನ್ನ ಮೈಲಿಗಲ್ಲನ್ನು ಹೊಂದಿ ಗುರುತಿಸಿಕೊಳ್ಳುತ್ತಾ ಮುಂದೆ ಸಾಗುತ್ತಿದೆ. ಮನುಷ್ಯರು ತನ್ನ ಪ್ರತಿಯೊಂದು ಕೆಲಸ ಕಾರ್ಯಗಳಿಗೂ ಇದರ ಸಹಾಯ ಪಡೆದುಕೊಳ್ಳುತ್ತಿದ್ದಾರೆ. ಒಂದು ವಿಷಯವನ್ನು ಹಲವಾರು ಬಗೆಯಲ್ಲಿ ಪ್ರಸ್ತುತ ಪಡಿಸುವಿಕೆಗೆ ನೆರವು ನೀಡಲು ಜಾಲತಾಣಗಳ ಅಗತ್ಯವಿದೆ.

21 ನೇ ಶತಮಾನದ ಆರಂಭದಲ್ಲಿ ಜಾಲಾತಾಣಗಳಲ್ಲಿ ಆಗುತ್ತಿರುವ ಬದಲಾವಣೆಗಳು ನೂತನ ಆವಿಷ್ಕಾರಗಳು ಮಾನವ ಕುಲದಲ್ಲಿ ವ್ಯಾಪಕ ಬದಲಾವಣೆಗಳನ್ನು ತರುತ್ತಿವೆ. ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಾದ ನೂತನ ಶೋಧನೆಯ ಫಲವಾಗಿ ಬಹುಮಾಧ್ಯಮಗಳು ಸಾಮಾನ್ಯ ಜನರ ಕೈಗೂ ಎಟುಕುವಂತಾಗಿದೆ. ಈ ದೃಷ್ಟಿಕೋನದಿಂದಲೇ ಸಾಮಾಜಿಕ ಜಾಲತಾಣಗಳು ಎಲ್ಲರಿಗೂ ದೊರೆಯುವ ವ್ಯವಸ್ಥೆ ಮೂಡಿಬಂದಿದೆ. ವೆಬ್‌ಸೈಟ್‌ಗಳು, ಯೂಟೂಬ್, ಟ್ವಿಟ್ಟರ್, ಫೇಸ್ ಬುಕ್ ಆರ್‌ಕುಟ್, ಬ್ಲಾಗ್ ವಿಕೀಪೀಡಿಯ, ಇಂಟರ್ ನೆಟ್ ಮೊಬೈಲ್, ಇ ರೇಡಿಯೋ, ಇ ದಿನಪತ್ರಿಕೆ. ಇ-ಟಿವಿ, ಇವೆಲ್ಲ ನವ ಮಾಧ್ಯಮಗಳ ಪಟ್ಟಿಯಲ್ಲಿನ ವಸ್ತುಗಳು.

ದಾವಣಗೆರೆ ಸ್ನಾತಕೊತ್ತರ ವಿದ್ಯಾರ್ಥಿಗಳ ಮೇಲೆ ಸಾಮಾಜಿಕ ಜಾಲತಾಣಗಳು ಪ್ರಮುಖವಾಗಿ ಧನಾತ್ಮಕವಾದಂತಹ ಪ್ರಭಾವವನನ್ನು ಬೀರಿದೆ. ವಿದ್ಯಾರ್ಥಿಗಳು ಜಾಲತಾಣಗಳನ್ನು ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಹೆಚ್ಚು ಬಳಸುತ್ತಿದ್ದಾರೆ. ಇದರಿಂದ ಅವರು ತಮ್ಮ ಶಿಕ್ಷಣದಲ್ಲಿ ಹಾಗೂ ವೈಯಕ್ತಿಕ ಜ್ಞಾನ ಹೆಚ್ಚಿಸಿಕೊಳ್ಳುವುದರಲ್ಲಿ ಅಭಿವೃದ್ದಿಯಾಗುತ್ತಿದ್ದಾರೆ. ಪರೀಕ್ಷೆಯಲ್ಲಿ ಉತ್ತಮವಾದಂತಹ ಅಂಕವನ್ನು ಪಡೆದುಕೊಳ್ಳಲು ನೆರವಾಗಿವೆ. ಈ ಒಂದು ಕಾರಣದಿಂದಲೆ ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿ ಪಡೆಯಲು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಹಾಗೆಯೆ ಮಾಹಿತಿ ಮನೋರಂಜನೆಯ ಜೊತೆಗೆ ವಿದ್ಯಾರ್ಥಿಗಳು ಇತರೆ ವಿಷಯಗಳ ಬಗೆಗೆ ಒಲವನ್ನು ತೋರಿಸುತ್ತಾರೆ. ಈ ಪ್ರಮಾಣದಲ್ಲಿ ಹುಡುಗಿಯರ ಒಲುಮೆ ಕಡಿಮೆ ಇದ್ದು ಹುಡುಗರು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದ್ದು, ಇದು ಜೊತೆಗಿರುವ ಸ್ನೇಹಿತರ ಹಾಗೂ ಅವರ ವರ್ತನೆ, ಆಸಕ್ತಿ ಇವೆಲ್ಲವೂ ಕಾರಣವಾಗಿದೆ.

ಸಾಮಾಜಿಕ ಜಾಲತಾಣಗಳು ನಿರ್ದಿಷ್ಟ ವ್ಯಕ್ತಿ ಸಮೂಹ ಸಮಾಜಕ್ಕೆ ಸೀಮಿತವಾಗಿರದೆ ಎಲ್ಲರಿಗೂ ಸೇವೆಯನ್ನು ಒದಗಿಸುತ್ತಿದೆ. ಇದರಿಂದ ಸಂಸ್ಕೃತಿಯನ್ನು ಪಸರಿಸುವ ಕಾರ್ಯವನ್ನು ಸಹ ಮಾಡುತ್ತಿವೆ ಹಾಗೂ ತಾಂತ್ರಿಕ ಯುಗದಲ್ಲಿ ಮಾನವರಿಗೆ ಎಲ್ಲಾ ಕ್ಷೇತ್ರಕ್ಕೆ ಸಂಭಂದಿಸಿದಂತೆ ನೆರವು ನೀಡುವ ಕಾರ್ಯವನ್ನು ಈ ಸಾಮಾಜಿಕ ಜಾಲತಾಣಗಳು ಮಾಡುತ್ತಿವೆ. ಸಾಮಾಜಿಕ ಜಾಲತಾಣಗಳಿಂದ ವೇಗದ ಸಂವಹನವನ್ನು ಸಾಧಿಸಬಹುದೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಏಕೆಂದರೆ ಎಲ್ಲಾ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಹೊಂದಿರುವುದರಿಂದ ಪರಸ್ಪರ ಮಾಹಿತಿಯಾಗಿರಬಹುದು, ಪ್ರಚಲಿತ ವಿಷಯಗಳ ಬಗ್ಗೆ ಚರ್ಚೆಯಾಗಿರಬಹುದು, ದೂರದಲ್ಲಿರುವ ಸ್ನೇಹಿತರೊಂದಿಗೆ ಒಡನಾಟ ಈ ಎಲ್ಲಾ ಕ್ರಿಯೇಯ ಕಾರಣದಿಂದಲು ಜಾಲತಾಣಗಳು ವೇಗದ ಸಂವಹನಕ್ಕೆ ದಾರಿಯಾಗಿದೆ.

**ಸಾಮಾಜಿಕ ಜಾಲತಾಣಗಳನ್ನು ಮಾಹಿತಿ ಪಡೆಯಲು ಬಳಸುತ್ತಾರೆ:**

ದಾವಣಗೆರೆಯಲ್ಲಿ ಸ್ನಾತಕೊತ್ತರ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳನ್ನು ಮಾಹಿತಿ ಪಡೆಯುವ ಉದ್ದೇಶದಿಂದ ಬಳಸುತ್ತಾರೆ ಎಂದು ಖಚಿತವಾಗಿ ಹೇಳಬಹುದಾಗಿದೆ. ಹುಡುಗಿಯರು 80% ಹಾಗೂ ಹುಡುಗರು 66% ಮಾಹಿತಿ ಪಡೆಯುವ ಉದ್ದೇಶದಿಂದ ಬಳಸುತ್ತಿದ್ದಾರೆ ಎನ್ನಬಹುದಾಗಿದೆ.

ಶೇಕಡಾವಾರಿನ ಪ್ರಮಾಣ ಹೆಚ್ಚಿದ್ದು ತಮ್ಮ ಶಿಕ್ಷಣದ ಹಾಗೂ ಪಠ್ಯಕ್ರಮದ ವಿಷಯದ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆಯುವ ಸಲುವಾಗಿ ಬಳಸುತ್ತಿದ್ದು ಇದರಿಂದ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯುವಲ್ಲಿ ನೆರವಾಗಲಿದೆ ಎಂದು ಸಹ ಹೇಳಿದ್ದಾರೆ. ಒಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿ ಪಡೆಯುವ ಮೂಲವಾಗಿದೆ ಎನ್ನಬಹುದಾಗಿದೆ.

**ಸಾಮಾಜಿಕ ಜಾಲತಾಣಗಳಿಂದ ಜ್ಞಾನ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು:**

ಸಾಮಾಜಿಕ ಜಾಲತಾಣಗಳನ್ನು ಮಾಹಿತಿ ಪಡೆಯುವ ಉದ್ದೇಶದಿಂದ ಬಳಸಿಕೊಳ್ಳುತ್ತಿದ್ದಾರೆ. ಎಂಬ ಅಂಶದ ಜೊತೆಗೆ ಜ್ಞಾನ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು ಎಂಬ ಪ್ರಾಕಲ್ಪನೆ ನಿಜವಾಗಿದೆ. ಹುಡುಗಿಯರು ಶೇಕಡವಾರು ಪ್ರಮಾಣವನ್ನು ಗಮನಿಸಿದಾಗ ಹುಡುಗಿಯರು 54% ಉತ್ತಮ ಎಂದು, ಹುಡುಗರು 78% ಉತ್ತಮ ಎಂದು ಒಪ್ಪಿಕೊಂಡಿದ್ದಾರೆ. ಈ ಶೇಕಡಾವಾರು ಪ್ರಮಾಣವನ್ನು ಗಮನಿಸಿದಾಗ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳಿಂದ ವಿದ್ಯಾಭ್ಯಾಸಕ್ಕೆ ಹಾಗೂ ಪಡೆದ ಮಾಹಿತಿಯಿಂದ ಜ್ಞಾನ ಮಟ್ಟ ಹೆಚ್ಚಾಗಿದ್ದು ಇದರ ಮೂಲಕ ಸ್ವ ಅಭಿವೃದ್ಧಿ ತಂದು ಕೊಳ್ಳಲು ನೆರವಾಗಲಿದೆ ಎನ್ನಬಹುದು.

**ಮನೋರಂಜನೆ ಉದ್ದೇಶಕ್ಕಾಗಿ ಹೆಚ್ಚಾಗಿ ಬಳಸುತ್ತಿಲ್ಲಾ:**
ಈ ಕಿರು ಸಂಶೋಧನೆಯನ್ನು ಮಾಡುವ ಉದ್ದೇಶದಿಂದ ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಹಾಗೂ ಅವರಿಂದ ಮಾಹಿತಿ ಪಡೆದ ನಂತರ ಬಂದ ಫಲಿತಾಂಶದಿಂದ ವಿದ್ಯಾರ್ಥಿಗಳು ಹೆಚ್ಚಾಗಿ ಮನೋರಂಜನೆ ಉದ್ದೇಶಕ್ಕಾಗಿ ಬಳಸುತ್ತಿಲ್ಲಾ ಎಂಬ ಅಂಶ ಬಯಲಿಗೆ ಬಂದಿದೆ. ಹುಡುಗಿಯರು ಕೇವಲ 6% ಮನೋರಂಜನೆಗಾಗಿ ಬಳಸಿದರೆ ಹುಡುಗರು 90% ಮನೋರಂಜನೆಗಾಗಿ ಬಳಸುತ್ತಾರೆ. ಈ ಮನೋರಂಜನೆ ಭಾಗದಲ್ಲಿ ಫೇಸ್ ಬುಕ್ ಜಾಲತಾಣವನ್ನು ಹೆಚ್ಚಾಗಿ ಬಳಸುತ್ತಿದ್ದು ಚಾಟಿಂಗ್ ಮಾಡುವುದು, ಫೋಟೊ ಅಪ್ ಲೋಡ್ ಮಾಡುವುದು, ಗೇಮ್ ಆಡುವುದು, ವೀಡಿಯೋ ವೀಕ್ಷಣೆ, ಹಾಡನ್ನು ಕೇಳುವ ಉದ್ದೇಶಕ್ಕಾಗಿ ಬಳಸುತ್ತಿದ್ದಾರೆ ಎನ್ನಬಹುದಾಗಿದೆ.

**ಸಾಮಾಜಿಕ ಜಾಲತಾಣಗಳಿಂದ ಬರುವ ಮಾಹಿತಿ ಸತ್ಯದಿಂದ ದೂರವಿರುವ ಸಾಧ್ಯತೆ ಇರುವುದಿಲ್ಲಾ:**
ಸಾಮಾಜಿಕ ಜಾಲ ತಾಣಗಳಿಂದ ಬರುವ ಮಾಹಿತಿ ಸತ್ಯದಿಂದ ದೂರವಿರುವ ಸಾಧ್ಯತೆ ಇರುವುದಿಲ್ಲಾ ಎಂಬ ಉತ್ತರ ವಿದ್ಯಾರ್ಥಿಗಳಿಂದ ಕಂಡು ಬಂದಿದೆ. ಹುಡುಗಿಯರು ಶೇ 100 ಕ್ಕೆ 39% ಒಪ್ಪಿದ್ದು 75% ಗೆ 50% ರಷ್ಟು ಸತ್ಯವಿರುತ್ತದೆ ಎಂದು ನಂಬಿದ್ದಾರೆ. ಹಾಗೂ ಹುಡುಗರು 100% 20% ಒಪ್ಪಿದ್ದು 75% ಗೆ 60% ಒಪ್ಪಿದ್ದಾರೆ. ಈ ಅಂಕಿ –ಅಂಶವನ್ನು ಗಮನಿಸಿದಾಗ ಸಾಮಾಜಿಕ ಜಾಲತಾಣಗಳಿಂದ ಪಡೆದ ಮಾಹಿತಿ ಸತ್ಯದಿಂದ ದೂರ ಇರಲು ಸಾಧ್ಯವಿಲ್ಲಾ ಎಂಬುದನ್ನು ವಿದ್ಯಾರ್ಥಿಗಳು ಒಟ್ಟಾರೆಯಾಗಿ 75% ನಂಬುತ್ತಾರೆ ಎಂದು ತಿಳಿದುಬಂದಿದೆ. ಏಕೆಂದರೆ ಎಲ್ಲಾ ಮಾಹಿತಿಗಳು ನೈಜತೆಯ ಆಧಾರದಲ್ಲಿ ಹಾಗೂ ಆ ವಿಷಯಗಳು ಬಗೆಗೆ ಮಾಧ್ಯಮದಲ್ಲಿ ಬಹುತೇಕ ಬಂದಿರುವ ದೃಷ್ಟಿಕೋನ ಮತ್ತು ಯಾವುದೇ ಕೆಟ್ಟ ಪರಿಣಾಮ ಬೀರುವುದರಿಂದ ಪಡೆಯುವ ಮಾಹಿತಿ ಸತ್ಯದಿಂದ ದೂರವಿರುವ ಸಾಧ್ಯತೆ ಇಲ್ಲ ಎಂದು ಹೇಳಬಹುದು.

**ಫಲಿತಾಂಶಗಳು**

- ದಾವಣಗೆರೆಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲ ತಾಣಗಳ ಬಗ್ಗೆ ಅದರ ಕಾರ್ಯ ವೈಖರಿಯ ಬಗ್ಗೆ ತಿಳುವಳಿಕೆ ಇದೆ.
- ವಿದ್ಯಾರ್ಥಿಗಳು ಸಾಮಾಜಿಕಜಾಲ ತಾಣಗಳನ್ನು ಬಳಕೆ ಮಾಡುತ್ತಿದ್ದಾರೆ.
- ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕೆ ಬೇಕು ಎಂಬ ಅಂಶ ತಿಳಿದು ಬಂದಿದೆ.
- ಕೆಲವರನ್ನು ಹೊರತು ಪಡಿಸಿ ಎಲ್ಲ ವಿದ್ಯಾರ್ಥಿಗಳಿಗೂ ಇಂಟರ್‌ನೆಟ್ ಬಗ್ಗೆ ಸಂಪೂರ್ಣವಾದಂತಹ ಅರಿವಿದೆ.
- ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚಾಗಿ ಫೇಸ್‌ಬುಕ್ ಹಾಗೂ ಗೂಗಲ್ ಬಳಸುತ್ತಾರೆ ಎಂಬ ಅಂಶ ಬಯಲಿಗೆ ಬಂದಿತು.
- ಸಾಮಾಜಿಕ ಜಾಲತಾಣಗಳನ್ನು ಮಾಹಿತಿ ಪಡೆಯುವ ಹಾಗೂ ಇತರರೊಂದಿಗೆ ಮಾಹಿತಿ ಹಂಚಿಕೊಳ್ಳುವ ಉದ್ದೇಶಕ್ಕಾಗಿಯೇ ಹೆಚ್ಚು ಬಳಸುತ್ತಾರೆ ಹಾಗೂ ಅದರಿಂದ ವಿದ್ಯಾಭ್ಯಾಸದಲ್ಲಿ ಉಪಯೋಗ ಪಡೆದುಕೊಂಡು ಅಭಿವೃದ್ಧಿ ಹೊಂದಿದ್ದಾರೆ ಎನ್ನುವ ಫಲಿತಾಂಶ ಕಂಡು ಬಂದಿತು
- ಎಲ್ಲಾ ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ಸಾಮಾಜಿಕ ಜಾಲ ತಾಣಗಳ ಖಾತೆಯನ್ನು ಹೊಂದಿರುವುದು ಕಂಡು ಬರುತ್ತದೆ
- ಸಾಮಾಜಿಕ ಜಾಲ ತಾಣಗಳಿಂದ ವೇಗವಾಗಿ ಸಂಪರ್ಕ ಸಾಧಿಸಬಹುದು ಎಂದು ಶೇಕಡಾ99ರಷ್ಟು ವಿದ್ಯಾರ್ಥಿಗಳು ಒಪ್ಪಿಕೊಂಡಿರುವುದು ಫಲಿತಾಂಶದಲ್ಲಿ ಕಂಡು ಬರುತ್ತದೆ.
- ಸಾಮಾಜಿಕ ಜಾಲತಾಣಗಳಿಂದ ಪಡೆದ ಮಾಹಿತಿಯಿಂದ 75% ರಷ್ಟು ವಿದ್ಯಾರ್ಥಿಗಳು ಉತ್ತಮ ಪ್ರಮಾಣದಲ್ಲಿ ಉಪಯೋಗವಾಗಿದೆ ಎಂದು ತಿಳಿಸಿದ್ದಾರೆ.
- ಸಾಮಾಜಿಕ ಜಾಲ ತಾಣಗಳಿಂದ ಪಡೆದ ಮಾಹಿತಿ ಸತ್ಯವಾಗಿರುತ್ತದೆ ಹಾಗೂ ನಂಬುತ್ತೇನೆ ಎಂದು ಬಹುತೇಕ ವಿದ್ಯಾರ್ಥಿಗಳು ಒಪ್ಪಿಕೊಂಡಿರುವುದು ಕಂಡು ಬರುತ್ತದೆ.
- ಪ್ರತಿದಿನ ಸುಮಾರು ಕನಿಷ್ಟ 2 ಗಂಟೆಗಳ ಕಾಲ ಜಾಲತಾಣಗಳ ಬಳಕೆಯನ್ನು ಮಾಡುತ್ತಿದ್ದಾರೆ ಎಂಬುದು ತಿಳಿದು ಬಂದಿದೆ.
- ಸಾಮಾಜಿಕ ಜಾಲ ತಾಣಗಳು ಮನೋರಂಜನೆಯ ಸಾಧನವಾಗಿದ್ದು ಈ ದೃಷ್ಟಿಯಿಂದ ಫೇಸ್‌ಬುಕ್‌ನ್ನು ಮನೋರಂಜನೆಯ ಉದ್ದೇಶದಿಂದ ಬಳಸುತ್ತಾರೆ. ಎಂಬ ಅಂಶ ತಿಳಿದು ಬಂದಿದೆ

**ಗ್ರಂಥ ಋಣಿ**

1. ಸೋಶಿಯಲ್ ಮೀಡಿಯಾ–ಆರ್ಯ ನರೇಂದ್ರ 2001 (ಅನ್ಮೊಲ್ ಪಬ್ಲಿಕೇಷನ್ ಪ್ರೈ.ಲಿಮಿಟೆಡ್)
2. ಮಾಧ್ಯಮ –ಮಾಲೂರು ಪ್ರಶಾಂತ್ ಬೆಂಗಳೂರು (2010)
3. ಶಿಕ್ಷಣ ಮತ್ತು ಗಣಕಯಂತ್ರ–ಪುಟ 186
4. ದಿ ಹಿಂದು ಬಿಸಿನೆಸ್ ಲೈನ್– ಸೋಮವಾರ ಫೆಬ್ರವರಿ 24, 2014
5. ಕನ್ನಡಪ್ರಭ ಪತ್ರಿಕೆ–ಫೆಬ್ರವರಿ 4 ಪುಟ 1 ಮತ್ತು 11
6. ಮಾಧ್ಯಮ ಸೌರಭ – ಡಾ.ಎ.ಎಸ್ ಬಾಲಸುಬ್ರಹ್ಮಣ್ಯ, ಮುದ್ರಕರು ಸರಸ್ವತಿ ಅಫ್ಸೆಟ್ ಮುದ್ರಣಾಲಯ ಧಾರವಾಡ.